ಸದಸ್ಯರು. ಯಾವುದೇ ತೀರ್ಪು ಇರಲಿ ತೀರ್ಪನ್ನು ಸುಟ್ಟು ಹಾಕುತ್ತೇನೆ ಎನ್ನುವ ಪದವನ್ನು ಏನು ಬಳಸಿದ್ದಾರೆ, ಅದನ್ನು ತಾವು ದಯಮಾಡಿ ಕಡತದಿಂದ ತೆಗೆದುಹಾಕಬೇಕು.

ಶ್ರೀ ವಾಟಾಳ್ ನಾಗರಾಜ್ : ಸುಟ್ಟುಹಾಕುತ್ತೇನೆ ಎನ್ನುವ ಶಬ್ದ ಏನಿದೆ ಅದನ್ನು ಕಡತದಿಂದ ತೆಗೆದುಹಾಕುವುದರಿಂದ ಏನೂ ಉಳಿದಿಲ್ಲ ಈಗ ಅದನ್ನು ನಾನು ಸುಡುತ್ತೇನೆ. ನಾನು ಈ ಸದನದ ಗೌರವಕ್ಕೆ ಚ್ಯುತಿ ತರಬೇಕೆಂಬ ಈ ಸದನಕ್ಕೆ ಅತ್ಯಂತ ಉನ್ನತವಾದ ಪರಂಪರೆ ಇದೆ. ಅದಕ್ಕೆ ಚ್ಯುತಿ ತರಬೇಕು ಎಂಬ ಮನಸ್ಸು ನನಗಿಲ್ಲ. ಆದರೆ ಇವತ್ತು ನನಗೆ ನೋವಾಗಿದೆ, ಈ ರಾಜ್ಯದ ನಾಲ್ಕೂವರೆ ಕೋಟಿ ಕನ್ನಡಿಗರಿಗೆ ಆಗಿರತಕ್ಕ ಅನ್ಯಾಯದ ಈ ತೀರ್ಪಿನ ಬಗ್ಗೆ ನಾವು ಪ್ರತಿಭಟನೆ ಮಾಡಲೇಬೇಕಾಗಿದೆ. ಅಂತಹ ಒಂದು ಅವಕಾಶ ನನಗೆ ಈಗ ಸಿಕ್ಕಿದೆ. ಅತ್ಯಂತ ಘೋರ ಅನ್ಯಾಯದ ತೀರ್ಪನ್ನು ನಾನು ಸುಡಲೇಬೇಕಾಗಿದೆ. ನಿಮ್ಮನ್ನು ನಾನು ಹೊಣೆ ಮಾಡುತ್ತಿಲ್ಲ. ಈ ಸಭೆಗೆ ಅಗೌರವ ತರಬೇಕೆನ್ನುವ ಉದ್ದೇಶವಿಲ್ಲ. ಆದ್ದರಿಂದ ತಮಗೆ ತಿಳಿಸುತ್ತಿದ್ದೇನೆ. ವಾಟಾಳ್ ನಾಗರಾಜ್‌ರವರು ಏನೂ ನನಗೆ ತಿಳಿಸದೆ ಹೇಗೆ ಸುಟ್ಟರು ಎಂದು ತಾವು ಮನಸ್ಸಿನಲ್ಲಿ ನೋವುಪಟ್ಟುಕೊಳ್ಳಬಾರದು ಎಂದು ತಮಗೆ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯಸದಸ್ಯರು ಸ್ವಲ್ಪ ಜೇಬಿಗೆ ಕೈ ಹಾಕಬೇಡಿ. ಸ್ವಲ್ಪ ಕುಳಿತುಕೊಳ್ಳಿ.

(ಈ ಹಂತದಲ್ಲಿ ಮಾನ್ಯಸದಸ್ಯರಾದ ವಾಟಾಳ್‌ನಾಗರಾಜ್‌ರವರು ಲೈಟರ್‌ನಿಂದ ಕಾವೇರಿ ನ್ಯಾಯಿಮಂಡಳಿ ತೀರ್ಪಿನ ಪ್ರತಿಗೆ ಬೆಂಕಿ ಇಟ್ಟರು.)

(ಗೊಂದಲ)

(ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಪ್ರತಿಭಟಿಸಿದರು)

ಅಧ್ಯಕ್ಷರು : ಇದು ಬಹಳ ತಪ್ಪು. ಮಾನ್ಯ ವಾಟಾಳ್ ನಾಗರಾಜ್‌ರವರೆ, ನಿಮ್ಮ ಪ್ರತಿಭಟನೆ ತೋರಿಸುವುದಕ್ಕೆ ವಿಧಿವಿಧಾನಗಳಿವೆ.

ಶ್ರೀ ವಾಟಾಳ್ ನಾಗರಾಜ್ : ನೀವು ನನ್ನನ್ನು ಈ ಸದನದಿಂದ ಹೊರಗೆ ಹಾಕಿದ್ದರೂ ಚಿಂತೆ ಇಲ್ಲ. ನಾನು ಈ ತೀರ್ಪನ್ನು ವಿರೋಧ ಮಾಡಿಯೇ ಮಾಡುತ್ತೇನೆ.

ಅಧ್ಯಕ್ಷರು :– ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :–ಈ ತೀರ್ಪಿನ ಪರವಾಗಿ ಇರತಕ್ಕಂಥ ಕನ್ನಡಿಗರನ್ನು ನಾನು ಕಾಣೆ. ಈ ಮಧ್ಯಂತರ ತೀರ್ಪು ಏನಿದೆ, ಅದರ ಪರವಾಗಿ ಇರತಕ್ಕಂಥ ಕನ್ನಡಿಗನು ನನಗಿನ್ನೂ ಸಿಕ್ಕಿಲ್ಲ. ಆದ್ದರಿಂದ ನೀವು ಎದ್ದುನಿಂತಾಗ ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯಬೇಕು.

ಶ್ರೀ ಆರ್. ನಾರಾಯನ್ ;– ಮಾನ್ಯ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು :– ನೀವು ಹೇಳಬೇಕು ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ನಾರಾಯಣ ;– ಕ್ಷಮಿಸಿ.

ಅಧ್ಯಕ್ಷರು :– ಕ್ಷಮಿಸಿದ್ದೇನೆ. ಈ ಸಭೆಯ ಘನತೆ ಗೌರವವನ್ನು ಎತ್ತಿಹಿಡಿಯುವುದರಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರ ಜವಾಬ್ದಾರಿ ಇದೆ, ಹೊಣೆಗಾರಿಗೆ ಇದೆ. ಆದರೆ ನಿಮ್ಮ ಇತಿಮಿತಿಗಳನ್ನು ನೀವು ಅರ್ಥಮಾಡಿಕೊಳ್ಳಬೇಕು. ಈ ತೀರ್ಪಿನ ಪ್ರತಿಯನ್ನು ಇಲ್ಲಿ ಸುಡತಕ್ಕಂಥಾದ್ದು ಸರಿಯಲ್ಲ. ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಮೂಲಭೂತ ಸ್ವಾತಂತ್ರ್ಯ ಇದೆ. ಮೂಲಭೂತ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವ ಕಾಲದಲ್ಲಿ ಸಮ್ಮ ಸಭೆಯ ನಿಯಮಾವಳಿಗಳ ಚೌಕಟ್ಟಿನಲ್ಲಿ ನೀವು ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದೇಹೋದರೆ ಅದು ಸಭಾನಿಂದನೆ ಆಗುತ್ತದೆ. ನಿಮ್ಮ ವಿರೋಧ ಸಭಾ ನಿಂದನೆಯಾಗಿ ಪರಿಣಮಿಸಬಹುದು